## 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)

## ಎಸ್.ಸಿ. ಸಂಖ್ಯೆ:132 /2022

**CW-12**
**PW-9**

| | |
|---|---|
| | **ಸಾಕ್ಷಿಯನ್ನು ದಿಃ 17-11-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ಮಂಜುನಾಥ |
| **ತಂದೆಯ ಹೆಸರು** | ಚಿನ್ನಣ್ಣ |
| **ವಯಸ್ಸು** | 35 |
| **ಉದ್ಯೋಗ** | ಸಿಪಿಸಿ 41 ಕಾಮಸಮುದ್ರ ಪೊಲೀಸ್ ಠಾಣೆ |
| **ವಾಸಸ್ಥಳ** | ಬಂಗಾರಪೇಟೆ |

**ಮುಖ್ಯ ವಿಚಾರಣೆ ಮಾನ್ಯ ಪಿ.ಪಿ ರವರಿಂದಃ-**

ನಾನು ಕಾಮಸಮುದ್ರ ಪೊಲೀಸ್ ಠಾಣೆಯಲ್ಲಿ ಕಳೆದ 2 ವರೆ ವರ್ಷಗಳಿಂದ ಪೊಲೀಸ್ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

ದಿಃ 26-9-21 ರಂದು ಬೆಳಿಗ್ಗೆ 9 ಗಂಟೆಗೆ ನನಗೆ ಮತ್ತು ಚಾಸಾ-13 ರವರಿಗೆ ಪಿಎಸ್ಐ ರವರು ಈ ಕೇಸಿನ ಅರೋಪಿ ಪತ್ತೆ ಬಗ್ಗೆ ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರಂತೆ ನಾವು ಅರೋಪಿಯ ಪತ್ತೆಗಾಗಿ ತೊಪ್ಪನಹಳ್ಳಿ, ಕಳವಂಚಿ ಸರ್ಕಲ್ ದಾಸರಮಲ್ಲ ಗ್ರಾಮ ಕಡೆ ಹುಡುಕಾಡಿ ನಂತರ ದಾಸರಮಲ್ಲ ಗ್ರಾಮದ ಅತನ ಮನೆಯಲ್ಲಿ ಹೋಗಿ ನೋಡಿದಾಗ ಅರೋಪಿ ಪತ್ತೆಯಾಗಿದ್ದು ಅತನನ್ನು ಬೆಳಿಗ್ಗೆ 11-30 ಗಂಟೆಗೆ ದಸ್ತಗಿರಿ ಮಾಡಿ ಮದ್ಯಾಹ್ನ 12-15 ಕ್ಕೆ ಠಾಣಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನು ಠಾಣಾಧಿಕಾರಿಗೆ ವರದಿ ನೀಡಿರುತ್ತೇನೆ. ಅ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.11 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ನಾನು ದಸ್ತಗಿರಿ ಮಾಡಿದ ಅರೋಪಿ ನ್ಯಾಯಾಲಯದ ಮುಂದೆ ಇರುತ್ತಾರೆ.

**ಪಾಟೀ ಸವಾಲು ಅರೋಪಿ ಪರ ವಕೀಲರಿಂದಃ-**

ಅ ದಿನ ನಾವು ಬೆಳಿಗ್ಗೆ 9 ಗಂಟೆಗೆ ಪೊಲೀಸ್ ಠಾಣೆ ಬಿಟ್ಟೆವು. ಅ ದಿನ ನಾನು ಹಗಲು ಕರ್ತವ್ಯದಲ್ಲಿದ್ದೆ. ಹಗಲು ಕರ್ತವ್ಯಕ್ಕೆ ಬೆಳಿಗ್ಗೆ 9-30 ರಿಂದ 10 ಗಂಟೆಗೆ ಬರುತ್ತೇವೆ ಎಂದರೆ ಸರಿಯಲ್ಲ. ನಾವು ಬೆಳಿಗ್ಗೆ 9 ಗಂಟೆಗೆ ಠಾಣೆ ಬಿಟ್ಟ ನಂತರ ಮೊದಲು ತೊಪ್ಪನಹಳ್ಳಿಗೆ ಹೋದೆವು. ಕಾಮಸಮುದ್ರದಿಂದ ತೊಪ್ಪನಹಳ್ಳಿಗೆ 8 ಕಿ.ಮೀಟರ್ ದೂರ ಅಗುತ್ತದೆ. ಕಾಮಸಮುದ್ರದಿಂದ ತೊಪ್ಪನಹಳ್ಳಿಗೆ ಹೋಗಲು ಸುಮಾರು 15 ನಿಮಿಷ ಬೇಕಾಗುತ್ತದೆ. ಅಲ್ಲಿಂದ ಕಳವಂಚಿ ಸರ್ಕಲ್ ಗೆ ಹೋಗಲು 5 ನಿಮಿಷ ಸಮಯ ಬೇಕಾಗುತ್ತದೆ. ಕಳವಂಚಿ ಸರ್ಕಲ್ ನಲ್ಲಿ ಸುಮಾರು 1 ಗಂಟೆಯವರೆಗೆ ವಿಚಾರಿಸಿದೆವು. ನಂತರ ಕಳವಂಚಿಯಿಂದ ದಾಸರಮಲ್ಲ ಗ್ರಾಮಕ್ಕೆ ಹೋದೆವು. ಕಳವಂಚಿ ಸರ್ಕಲ್ ನಿಂದ ದಾಸರಮಲ್ಲ ಗೆ 4 ಕಿ.ಮೀಟರ್ ದೂರವಾಗಿರುತ್ತದೆ. ನಾವು ದಾಸರಮಲ್ಲ ತಲುಪಲು 8 ನಿಮಿಷ ಬೇಕಾಗುತ್ತದೆ. ನಾವು ದಾಸರಮಲ್ಲ ಗ್ರಾಮಕ್ಕೆ ಹೋದಾಗ ಬೆಳಿಗ್ಗೆ 10-30 ಗಂಟೆಯಾಗಿರುತ್ತದೆ. ದಾಸರಮಲ್ಲ ಗ್ರಾಮದಲ್ಲಿ ಸುಮಾರು 1 ಗಂಟೆಯವರೆಗೆ ವಿಚಾರಿಸಿದೆವು. ಬೆಳಿಗ್ಗೆ 11-30 ಗಂಟೆಗೆ ಅರೋಪಿಯನ್ನು ಅವರ ಮನೆಯಲ್ಲಿ ನಮ್ಮ ವಶಕ್ಕೆ ಪಡೆದುಕೊಂಡೆವು. ನಮ್ಮ ಇಲಾಖೆಯಿಂದ ಅರೋಪಿಗಳನ್ನು ಪತ್ತೆ ಮಾಡಲು ಲೊಕೇಷನ್ ಆ್ಯಪ್ ನ್ನು ಮೊಬೈಲ್ ಗಳಿಗೆ ಡೌನ್

ಲೋಡ್ ಮಾಡಲು ಪರವಾನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದೂರಿನಲ್ಲಿ ಆರೋಪಿಯ ವಾಸ ದಾಸರಮಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿಯನ್ನು ಪತ್ತೆ ಮಾಡಲು ನೇರವಾಗಿ ದಾಸರಮಲ್ಲ ಗ್ರಾಮಕ್ಕೆ ತೊಂದರೆ ಇರಲಿಲ್ಲ ಎಂದರೆ ಪತ್ತೆ ಮಾಡಬೇಕಾದರೆ ಎಲ್ಲಿ ಇದ್ದಾರೆಂದು ವಿಚಾರಣೆ ಮಾಡಬೇಕಾಗಿದ್ದರಿಂದ ನಾವು ತೊಪ್ಪನಹಳ್ಳಿ ಕಳವಂಚಿ ಕಡೆಗೆ ಹೋಗಿದ್ದೆವು. ಆರೋಪಿ ತೊಪ್ಪನಹಳ್ಳಿ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಅಥವಾ ಅವರು ಅಲ್ಲಿ ವಾಸ ಮಾಡುತ್ತಾರೆಂಬ ಬಗ್ಗೆ ದೂರಿನಲ್ಲಿ ಉಲ್ಲೇಖ ಇಲ್ಲ ಎಂದರೆ ನಮಗೆ ದೂರಿನ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಕೇಸಿನಲ್ಲಿ ಆರೋಪಿಯ ಅವಶ್ಯಕತೆ ಇಲ್ಲದೇ ಇದ್ದರೂ ಕೂಡ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಅತನ ವಿರುದ್ಧ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಗಣಪತಿ ಗುರುಸಿದ್ಧ ಬಾದಾಮಿ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ ಕೆ.ಜಿ.ಎಫ್(ಪೀಠ)**

## 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)

## ಎಸ್.ಸಿ. ಸಂಖ್ಯೆ:132 /2022

**CW-14**
**PW-10**

| | |
|---|---|
| | **ಸಾಕ್ಷಿಯನ್ನು ದಿಃ 17-11-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ಕೃಷ್ಣ |
| **ತಂದೆಯ ಹೆಸರು** | ವೆಂಕಟೇಶಪ್ಪ |
| **ವಯಸ್ಸು** | 45 |
| **ಉದ್ಯೋಗ** | ಹೆಚ್ ಸಿ 17 ಕಾಮಸಮುದ್ರ ಪೊಲೀಸ್ ಠಾಣೆ |
| **ವಾಸಸ್ಥಳ** | ಬಂಗಾರಪೇಟೆ |

**ಮುಖ್ಯ ವಿಚಾರಣೆ ಮಾನ್ಯ ಪಿ.ಪಿ ರವರಿಂದಃ-**

ನಾನು ಕಾಮಸಮುದ್ರ ಪೊಲೀಸ್ ಠಾಣೆಯಲ್ಲಿ ದಿ:20-7-2019 ರಿಂದ ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

ದಿಃ 26-9-21 ರಂದು ಚಾಸಾ-15 ರವರು ಈ ಕೇಸಿನಲ್ಲಿ ಸ್ಥಳ ಮಹಜರ್ ಕ್ರಮ ಜರುಗಿಸಲು ಆರೋಪಿಯೊಂದಿಗೆ ದೊಡ್ಡಪನ್ನಾಂಡಹಳ್ಳಿ ಗ್ರಾಮದ ಶಂಕರ್ ಬಾಬು ರವರ ಮನೆಯ ಹತ್ತಿರ ಕರೆದುಕೊಂಡು ಹೋಗಿದ್ದು ಆಟೋಗಳಿಗೆ ತಾನು ಬೆಂಕಿ ಹಚ್ಚಿರುವುದಾಗಿ ಆರೋಪಿ ಸ್ಥಳ ತೋರಿಸಿದ್ದು ಅಲ್ಲಿ ಮದ್ಯಾಹ್ನ 1-30 ರಿಂದ 2-30 ಗಂಟೆ ಸಮಯದಲ್ಲಿ ಚಾಸಾ-15 ರವರು ಮಹಜರ್ ಮಾಡಿದ್ದು ಆ ಮಹಜರ್ ಗೆ ಪ್ರಾಸಾ-7 ಮತ್ತು ಮಂಜುನಾಥ್ ರಾವ್ ರವರು ಸಹಿ ಮಾಡಿದ್ದು ಆರೋಪಿ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾನೆ. ನಾನು ಚಾಸಾ-15 ರವರ ಉಕ್ತಲೇಖನದಂತೆ ಮಹಜರ್ ಬರೆದಿದ್ದು ಆ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ.10(ಡಿ) ಎಂದು ಗುರುತಿಸಲಾಯಿತು. ಅಲ್ಲಿ ಆರೋಪಿಯು ಒಂದು ಬೆಂಕಿ ಪೊಟ್ಟಣವನ್ನು ಎತ್ತಿಕೊಟ್ಟಿದ್ದು ಅದನ್ನು ಚಾಸಾ-15 ರವರು ಜಪ್ತು ಪಡಿಸಿಕೊಂಡಿರುತ್ತಾರೆ. ಆ ಬೆಂಕಿಪೊಟ್ಟಣವನ್ನು ನೋಡಿದರೆ ಗುರುತಿಸುತ್ತೇನೆ. ಆ ಬೆಂಕಿಪೊಟ್ಟಣವನ್ನು ಈಗಾಗಲೇ ಮು.ಮಾ.6 ಎಂದು ಗುರುತಿಸಲಾಗಿದೆ. ಆ ಸ್ಥಳದಲ್ಲಿ ಅಲ್ಲಿ ನಾನು ಪೋಟೋಗನ್ನು ಮೊಬೈಲ್ ನಲ್ಲಿ ತೆಗೆದಿದ್ದು ಆ ಪೋಟೋವನ್ನು ನಿಪಿ.3 ಎಂದು ಗುರುತಿಸಲಾಗಿದೆ. ಆಟೋರೀಕ್ಷಾಗಳನ್ನು ಬಿಡುಗಡೆ ಕಾಲಕ್ಕೆ ನಾನೇ ಮೊಬೈಲ್ ನಲ್ಲಿ ಪೋಟೋ ತೆಗೆದಿದ್ದು ಆ ಪೋಟೋಗಳನ್ನು ನಿಪಿ.5 ರಿಂದ 8 ಎಂದು ಗುರುತಿಸಲಾಗಿದೆ. ನಾನು ಪೋಟೋಗಳನ್ನು ಮೊಬೈಲ್ ನಲ್ಲಿ ಸೆರೆಹಿಡಿದು ಪೋಟೋಗಳನ್ನು ಪ್ರಿಂಟ್ ಹಾಕಿ ಸಿ.ಡಿ ಮಾಡಿಕೊಟ್ಟ ಬಗ್ಗೆ ಪ್ರಮಾಣಪತ್ರವನ್ನು ನೀಡಿದ್ದು ಅದನ್ನು ನಿಪಿ.12 ಎಂದು ನನ್ನ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳಕ್ಕೆ ಸಂಬಂಧಪಟ್ಟ ಒಂದು ಸಿ.ಡಿ ಯನ್ನು ಮಾಡಿದ್ದು ಅದನ್ನು ನಿಪಿ.13 ಎಂದು ಗುರುತಿಸಲಾಯಿತು.

ಅದೇ ದಿವಸ 2-45 ರಿಂದ 3-00 ಗಂಟೆ ಸಮಯದಲ್ಲಿ ಶಂಕರ್ ಬಾಬು ಮನೆ ಮತ್ತು ಮುನಿಯಪ್ಪ ರವರ ಮನೆಯ ಹತ್ತಿರ ಪ್ರಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-15 ರವರು ಮಹಜರ್ ಮಾಡಿ 2 ಆಟೋಗಳನ್ನು ಮತ್ತು ಒಂದು ಟಿವಿಎಸ್ ದ್ವಿಚಕ್ರ ವಾಹನವನ್ನು ಜಪ್ತು ಮಾಡಿರುತ್ತಾರೆ. ಆಟೋಗಳ ನೊಂದಣಿ ಸಂಖ್ಯೆಃ ಕೆಎ 07-ಎ-7085 ಮತ್ತು ಕೆಎ 08-ಎ-1451

ಟಿವಿಎಸ್ ವಾಹನದ ಸಂಖ್ಯೆಃ ಟಿಎನ್-24-ಎಜೆ-1256 ಅಗಿರುತ್ತದೆ. ಪಿಎಸ್ಐ ರವರು ಸುಟ್ಟುಹೋಗಿದ್ದ ಬೂದಿ ಮತ್ತು ಅಟೋದ ಸುಟ್ಟ ಭಾಗಗಳನ್ನು ಜಪ್ತು ಮಾಡಿದ್ದಾರೆ. ಅ ಮಹಜರನ್ನು ನಾನೇ ಬರೆದಿದ್ದು ಅದನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಅ ದಿನ ಅಲ್ಲಿ ಜಪ್ತು ಮಾಡಿದ ಸುಟ್ಟ ಭಾಗಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಅ ದಿನ ಅಮಾನತ್ತುಪಡಿಸಿಕೊಂಡ ದ್ವಿಚಕ್ರ ವಾಹನವನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿದೆ. ನಿಪಿ.2 ಕ್ಕೆ ಪ್ರಾಸಾ-8, ಸುರೇಶ್ ಬಾಬು ಮತ್ತು ಪ್ರಾಸಾ-1 ರವರು ಸಹಿ ಮಾಡಿರುತ್ತಾರೆ.

**<u>ಪಾಟೀ ಸವಾಲು ಅರೋಪಿ ಪರ ವಕೀಲರಿಂದಃ-</u>**

ದಿಃ 26-9-21 ರಂದು ದೊಡ್ಡಪನ್ನಾಂಡಹಳ್ಳಿ ಗ್ರಾಮಕ್ಕೆ ನಾನು ಪಿಎಸ್ಐ ಮತ್ತು ಅರೋಪಿ ಹೋಗಿದ್ದೆವು. ಅ ದಿವಸ ಠಾಣೆಯನ್ನು 12-30 ಗಂಟೆಗೆ ಬಿಟ್ಟೆವು. ಕಾಮಸಮುದ್ರದಿಂದ ದೊಡ್ಡಪನ್ನಾಂಡಹಳ್ಳಿ ಗ್ರಾಮಕ್ಕೆ ಸುಮಾರು 20 ಕಿ.ಮೀಟರ್ ದೂರು ಅಗುತ್ತದೆ. ಸರ್ಕಾರಿ ವಾಹನದಲ್ಲಿ ಕಾಮಸಮುದ್ರದಿಂದ ದೊಡ್ಡಪನ್ನಾಂಡಹಳ್ಳಿಗೆ ಹೋಗಲು ಮುಕ್ಕಾಲು ಗಂಟೆ ಬೇಕಾಗುತ್ತದೆ. ಕಾಮಸಮುದ್ರದಿಂದ ದೊಡ್ಡಪನ್ನಾಂಡಹಳ್ಳಿಗೆ 7 ರಿಂದ 8 ಕಿ.ಮೀಟರ್ ದೂರು ಇದ್ದು 20 ಕಿ.ಮೀಟರ್ ದೂರ ಅಗುವುದಿಲ್ಲ ಎಂದರೆ ಸರಿಯಲ್ಲ. ಕಾಮಸಮುದ್ರದಿಂದ ಬೀಮಗಾನಹಳ್ಳಿಗೆ 8 ಕಿ.ಮೀಟರ್ ದೂರ ಅಗುತ್ತದೆ. ಕಾಮಸಮುದ್ರದಿಂದ ಬೀಮಗಾನಹಳ್ಳಿಗೆ ಕೇವಲ 3 ರಿಂದ 4 ಕಿ.ಮೀಟರ್ ಅಗುತ್ತದೆ ಎಂದರೆ ಸರಿಯಲ್ಲ. ಬೀಮಗಾನಹಳ್ಳಿಯಿಂದ ದೊಡ್ಡಪನ್ನಾಂಡಹಳ್ಳಿಗೆ 4 ಕಿ.ಮೀಟರ್ ದೂರು ಅಗುತ್ತದೆ ಎಂದರೆ ಸರಿಯಲ್ಲ. ದೊಡ್ಡಪನ್ನಾಂಡಹಳ್ಳಿ ಗ್ರಾಮಕ್ಕೆ ನಾವು ಸ್ಥಳಕ್ಕೆ ಬೇಟಿ ನೀಡಿದಾಗ ಅಲ್ಲಿ ಗ್ರಾಮಸ್ಥರು ಯಾರು ಬಂದಿರಲಿಲ್ಲ. ಮು.ಮಾ.6 ರಂತಹ ಬೆಂಕಿಪೊಟ್ಟಣ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ನನ್ನ ಮೊಬೈಲ್ ನಿಂದ ಪೋಟೋ ತೆಗೆಯಲಾಗಿದೆ ಎಂದು ಮಹಜರ್ ನಲ್ಲಿ ಬರೆದಿರುವುದಿಲ್ಲ. 2 ಅಟೋ ರೀಕ್ಷಾಗಳು ಮತ್ತು ಒಂದು ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಚಾಸಾ-15 ರವರು ಪರಿಶೀಲನೆ ಮಾಡಿರುತ್ತಾರೆ. ಅ ದಿನ ನಾವು ಸ್ಥಳಕ್ಕೆ ಹೋಗಿಲ್ಲ ಮತ್ತು ಅಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ದೂರುದಾರರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ನ್ನು ಅ ಅಟೋ ರೀಕ್ಷಾಗಳಿಗೆ ಮತ್ತು ದ್ವಿಚಕ್ರ ವಾಹನಕ್ಕೆ ಸಂಬಂಧಪಡದೇ ಇದ್ದರೂ ಕೂಡ ಈ ಕೇಸಿಗಾಗಿ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಬೇಟಿ ನೀಡಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ಠಾಣೆಯಲ್ಲಿ ಮಹಜರ್ ತಯಾರಿಸಿ ಅರೋಪಿ ವಿರುದ್ಧ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಮಸಮುದ್ರದಿಂದ ದೊಡ್ಡಪನ್ನಾಂಡಹಳ್ಳಿಗೆ ಕೇವಲ 8 ಕಿ.ಮೀಟರ್ ದೂರು ಅದರೂ ಸಹ 20 ಕಿ.ಮೀಟರ್ ದೂರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಗೂ ಅರೋಪಿಗೂ ಯಾವುದೇ ಸಂಬಂಧ ಇರದಿದ್ದರೂ ಸಹ ಪಿರ್ಯಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಗಣಪತಿ ಗುರುಸಿದ್ಧ ಬಾದಾಮಿ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ ಕೆ.ಜಿ.ಎಫ್(ಪೀಠ)